# ಕರ್ನಾಟಕ ಮಾಹಿತಿ ಆಯೋಗ

**ದಿನಾಂಕ: 24-01-2017ರಂದು ಸಂಜೆ 4.30ಕ್ಕೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ), ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.**

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)
2. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು
3. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು
4. ಶ್ರೀ ಕೆ.ಎಂ. ಚಂದ್ರೇಗೌಡ, ರಾಜ್ಯ ಮಾಹಿತಿ ಆಯುಕ್ತರು
5. ಶ್ರೀ ಪಿ.ಜಿ. ವಿಜಯಕುಮಾರ್, ರಾಜ್ಯ ಮಾಹಿತಿ ಆಯುಕ್ತರು
6. ಡಾ॥ ಸುಚೇತನ ಸ್ವರೂಪ್, ರಾಜ್ಯ ಮಾಹಿತಿ ಆಯುಕ್ತರು
7. ಡಾ॥ ಸುನೀಲ್ ಪಂವಾರ್, ಕಾರ್ಯದರ್ಶಿ
8. ಶ್ರೀಮತಿ ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿ
9. ಶ್ರೀ ದೊಡ್ಡ ನಾಗಯ್ಯ, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ
10. ಶ್ರೀ ಜಯ ಪ್ರಕಾಶ್, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ

ಶ್ರೀ ಎಲ್. ಕೃಷ್ಣಮೂರ್ತಿ, ಮಾನ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ), ಸಭೆಗೆ ಎಲ್ಲರನ್ನು ಸ್ವಾಗತಿಸಿದರು.

ಈ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:-

1) ಅನುಪಾಲನಾ ವರದಿ.

ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿನಾಂಕ: 04-01-2017ರಂದು ನಡೆದ ಸಭೆಯ ಅನುಪಾಲನಾ ವರದಿಯನ್ನು ಕಾರ್ಯದರ್ಶಿಯವರು ಸಭೆಗೆ ಒಪ್ಪಿಸಿದರು.

**ಈ ದಿನದ ಚರ್ಚಾ ವಿಷಯಗಳು :-**

**1. ನೂತನ ಕಟ್ಟಡದ ಉದ್ಘಾಟನೆ ಕುರಿತು**

a. ದಿನಾಂಕ.30.01.2017ರಂದು ನಡೆಯಲಿರುವ ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಆ ದಿನದಂದು ನೂತನ ಕಟ್ಟಡದ ಎದುರು ಇರುವ ರಸ್ತೆಗಳನ್ನು ಆ ಸಮಾರಂಭದ ಸಲುವಾಗಿ ತೆರವು ಮಾಡಲು ಡಿ.ಸಿ.ಪಿ.(ಟ್ರಾಫಿಕ್) ರವರಿಗೆ ಪತ್ರ ಬರೆದು ಖುದ್ದಾಗಿ ಭೇಟಿ ಆಗಿ ಕಾರ್ಯವನ್ನು ನೆರವೇರಿಸುವಂತೆ ಕೋರಲು ಕಾರ್ಯದರ್ಶಿಯವರಿಗೆ ಸೂಚಿಸಿತು.

b. ಹಿಂದಿನ ಮುಖ್ಯ ಮಾಹಿತಿ ಆಯುಕ್ತರುಗಳು ಹಾಗೂ ಮಾಹಿತಿ ಆಯುಕ್ತರುಗಳಿಗೆ ಸಮಾರಂಭದ ಆಮಂತ್ರಣ ಪತ್ರ ತಲುಪಿರುವ ಬಗ್ಗೆ ಸ್ಪಷ್ಟೀಕರಣ ಪಡೆಯಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

c. ಸಮಾರಂಭಕ್ಕೆ ನಿರೂಪಣೆ ಮಾಡಲು ಒಳ್ಳೆಯ ನಿರೂಪಕರನ್ನು ನೇಮಿಸಲು ಸಭೆ ಹಾಜರಿದ್ದ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿತು.

d. ಊಟದ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಮಾಡುವಂತೆ ಮತ್ತೊಮ್ಮೆ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು.

e. ಮಾಹಿತಿ ಹಕ್ಕು ಕಾಯ್ದೆಯ ಅನುಷ್ಠಾನದ 11ನೇ ವರ್ಷದ ಹಾಗೂ ಮಾಹಿತಿ ಸೌಧ ನೂತನ ಕಟ್ಟಡದ ಉದ್ಘಾಟನೆಯಾಗುತ್ತಿರುವ ಹಿನ್ನಲೆಯಲ್ಲಿ ಆಯೋಗಕ್ಕೆ ಹಾಗೂ ನೂತನ ಕಟ್ಟಡದ ನಿರ್ಮಾಣಕ್ಕೆ ಸಹಕರಿಸಿದ ಹಿಂದಿನ ಮುಖ್ಯ ಮಾಹಿತಿ ಆಯುಕ್ತರುಗಳು, ಮಾಹಿತಿ ಆಯುಕ್ತರು, ಕಾರ್ಯದರ್ಶಿಗಳು ಹಾಗೂ ಇನ್ನಿತರರಿಗೆ ಸನ್ಮಾನ ಮಾಡಬೇಕೆಂದು ತೀರ್ಮಾನಿಸಿ ಅವರೆಲ್ಲರಿಗೂ ನೆನಪಿನ ಕಾಣಿಕೆಯನ್ನು ಸಹಾ ನೀಡುವಂತೆ ವ್ಯವಸ್ಥೆ ಮಾಡಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು ಹಾಗೂ ಈ ಕಾರ್ಯ ಅತೀ ತುರ್ತಾಗಿ ಆಗಬೇಕೆಂದು ಸಹಾ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

f. ಮಾಹಿತಿ ಹಕ್ಕು ಕಾಯ್ದೆಯ ಅನುಷ್ಠಾನದ 11ನೇ ವರ್ಷದ ಫಲವಾಗಿ ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ಅರಿವು ಮೂಡಿಸಲು ಹಾಗೂ ಸಾರ್ವಜನಿಕರಿಗೆ ತಲುಪುವಂತೆ ವ್ಯವಸ್ಥೆ ಕಲ್ಪಿಸಲು ಸಭೆ ತೀರ್ಮಾನಿಸಿದ್ದು ಈ ಸಂಬಂಧ ಸಾರ್ವಜನಿಕರಿಗೆ ಆಕಾಶವಾಣಿ, ದೂರದರ್ಶನ ಹಾಗೂ ಪತ್ರಿಕಾ ಮಾಧ್ಯಮ ಹಾಗೂ ಇತರೆ ಸಮೂಹ ಮಾಧ್ಯಮಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿರುವುದನ್ನು ಸಭೆ ಮನಗಂಡು ಇಂತಹ ಕಾರ್ಯಕ್ರಮಗಳನ್ನು ಆಯೋಗದ ಮುಖಾಂತರ ನೆರವೇರಿಸುವಂತೆ ಕಾರ್ಯದರ್ಶಿಯವರಿಗೆ ಸಭೆ ಸೂಚಿಸಿತು. ಇದರ ವೆಚ್ಚವನ್ನು NFIC ರವರಿಂದ ಬಂದಿರುವ ಮೊತ್ತದಿಂದ ಭರಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

**2. ನೂತನ ಕಟ್ಟಡಕ್ಕೆ ನ್ಯಾಯಾಲಯ ಸಭಾಂಗಣಗಳು ಹಾಗೂ ಕಛೇರಿ ಸ್ಥಳಾಂತರಗೊಳ್ಳಲು ಪೂರ್ವ ಸಿದ್ಧತೆ**

a. ನೂತನ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲು ಇನ್ನು ಕೊಂಚ ಸಮಯಾವಕಾಶ ಬೇಕಾಗಿದೆಯೆಂದು ಮನಗೊಂಡು 30.01.2017ರ ಉದ್ಘಾಟನೆಯ ನಂತರ 15 ದಿನಗಳ ಒಳಗಾಗಿ "Ready to Occupy" ದೃಢೀಕರಣವನ್ನು ನೀಡಬೇಕೆಂದು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸುತ್ತಾ ಕುಡಿಯುವ ನೀರಿಗಾಗಿ Water Filter ಗಳನ್ನು ಅಳವಡಿಸಿ, ಶೌಚಾಲಯಗಳನ್ನು ಹಾಗೂ ನೀರಿನ ಟ್ಯಾಂಕ್‌ಗಳನ್ನು ಶುಚಿಗೊಳಿಸುವಂತೆ ಕಾರ್ಯಪಾಲಕ ಅಭಿಯಂತರರಿಗೆ ಮತ್ತೊಮ್ಮೆ ಸೂಚಿಸಿತು.

b. ನೂತನ ಕಟ್ಟಡದಲ್ಲಿ ಈಗಾಗಲೇ ಬಹುಮಹಡಿಗಳ ಕಟ್ಟಡದ 5ನೇ ಹಂತದಿಂದ OFC ಮೂಲಕ SECLAN connection ಅಳವಡಿಕೆಯಾಗಿದ್ದು ಅದಕ್ಕೆ ಅಗತ್ಯವಿರುವ ವಿದ್ಯುತ್ ಸಂಪರ್ಕ ಹಾಗೂ ಯು.ಪಿ.ಎಸ್.ಗೆ ಸಂಬಂಧಪಟ್ಟಂತ ವೈರಿಂಗ್ ವ್ಯವಸ್ಥೆಯನ್ನು ತುರ್ತಾಗಿ ಮಾಡಿಕೊಡುವಂತೆ ಕಾರ್ಯಪಾಲಕ ಅಭಿಯಂತರರಿಗೆ ಸಭೆ ಸೂಚಿಸಿತು.

c. ನೂತನ ಕಟ್ಟಡಕ್ಕೆ ಮಾಹಿತಿ ಆಯೋಗವು ಸ್ಥಳಾಂತರಗೊಳ್ಳುತ್ತಿರುವುದರಿಂದ ಹೊಸ ವಿಳಾಸದ ಬಗ್ಗೆ ಅಧಿಕೃತ ಜ್ಞಾಪನವನ್ನು ಹೊರಡಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

3. **ಕರ್ನಾಟಕ ಮಾಹಿತಿ ಆಯೋಗದಲ್ಲಿನ ಹಳೇ ಅನುಪಯುಕ್ತ ಸಾಮಾಗ್ರಿಗಳು ಹಾಗೂ ದಾಖಲಾತಿ ಕೊಠಡಿಯಲ್ಲಿನ ಹಳೇ ಕಡತಗಳ ವಿಲೇವಾರಿ ಬಗ್ಗೆ**

a. ನೂತನ ಕಟ್ಟಡಕ್ಕೆ ಸ್ಥಳಾಂತರಗೊಳ್ಳುತ್ತಿರುವ ಹಿನ್ನಲೆಯಲ್ಲಿ ಆಯೋಗದಲ್ಲಿರುವ ಹಳೇ ಅನುಪಯುಕ್ತ ಸಾಮಾಗ್ರಿಗಳನ್ನು ಕರ್ನಾಟಕ ಆರ್ಥಿಕ ನಿಯಮಗಳು ಕೆ.ಎಫ್.ಸಿ. ಅನ್ವಯ ಕ್ರಮ ಕೈಗೊಂಡು ಹರಾಜು ಅಥವಾ ವಿಲೇ ಮಾಡಬಹುದೆಂದು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು. ಮುಂದುವರೆಸುತ್ತಾ, ದಾಖಲಾತಿ ಕೊಟ್ಟಡಿಯಲ್ಲಿನ ಹಳೇ ಪ್ರಕರಣಗಳ ಕಡತಗಳ ವಿಲೇವಾರಿ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್‌ರವರಿಂದ ಅಭಿಪ್ರಾಯ ಪಡೆದು ತದನಂತರ ಅದರಂತೆ ಕ್ರಮ ಕೈಗೊಳ್ಳುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

4. **ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು**

a. ನ್ಯಾಯಾಲಯ ಸಭಾಂಗಣ ಸಂಖ್ಯೆ. 3, 4, 5 6 ಮತ್ತು 7ಕ್ಕೆ ಹೊಸದಾದ ಪೋಟೋ ಕಾಪಿಯರ್ ಅವಶ್ಯಕತೆಯಿದೆಯೆಂದು ಮಾನ್ಯ ಆಯುಕ್ತರುಗಳು ತಿಳಿಸಿದ ಹಿನ್ನಲೆಯಲ್ಲಿ ಹೊಸ ಕಂಪ್ಯೂಟರ್ ಸಾಮಾಗ್ರಿಗಳನ್ನು ಕೊಂಡುಕೊಳ್ಳುವಾಗ ಇವುಗಳನ್ನು ಖರೀದಿಸಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

b. ನೂತನ ಕಟ್ಟಡಕ್ಕೆ ಸ್ಥಳಾಂತರಗೊಳ್ಳುವುದರ ಬಗ್ಗೆ ಆಯೋಗದ ಆದೇಶಗಳೊಂದಿಗೆ ನೂತನ ಸ್ಥಳದ ವಿಳಾಸವನ್ನು ಸಹಾ ಕಳುಹಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

c. ಕರ್ನಾಟಕ ಮಾಹಿತಿ ಆಯೋಗದಲ್ಲಿ ಕಾರ್ಯ ನಿರ್ವಹಿಸಿದ ಮುಖ್ಯ ಮಾಹಿತಿ ಆಯುಕ್ತರುಗಳು ಹಾಗೂ ಇತರೆ ಆಯುಕ್ತರುಗಳ ಹೆಸರನ್ನು ಗೌರವ ಫಲಕದಲ್ಲಿ ನಮೂದು ಮಾಡಿ ನೂತನ ಕಟ್ಟಡದಲ್ಲಿ ಹಾಕುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸುತ್ತಾ ನೂತನ ಕಟ್ಟಡದಲ್ಲಿ ಉದ್ಘಾಟನಾ **'ನಾಮಫಲಕ'**ವನ್ನು ವಿಕಾಸ ಸೌಧದಲ್ಲಿನ ಮಾದರಿಯಲ್ಲಿ ಅಳವಡಿಸಿರುವಂತೆ, ಆಯೋಗದ ಒಳಾಂಗಣದಲ್ಲಿಯೂ ಸಹ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

31/1/2017

ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು